

■ ಚಿತ್ರ ಬರಹ: **ಸೌಖ್ಯ ಮೋಹನ್ ತಲಕಾಲುಕೊಪ್ಪ**

# ಸೀರೆಯ ಕುಚ್ಚು ಮಹಿಳೆಗೆ ಮೆಚ್ಚು



**ಸಿಲ್ಕ್ ಸೀರೆ ಇರಲಿ, ಕಾಟನ್ ಸಿಲ್ಕ್ ಸೀರೆಯೇ ಇರಲಿ, ಪಲ್ಲುವಿನ ಅಂಚಿಗೆ ಸುಂದರ ಕುಚ್ಚು ಇದ್ದರೆ ಅದರ ಲುಕ್ ಸಖತ್ ಆಗಿರುತ್ತದೆ. ಕುಚ್ಚಿನಲ್ಲೂ ಹತ್ತಾರು ವಿನ್ಯಾಸ, ನೂರೆಂಟು ಬಗೆ. ಈಗಂತೂ ಸೀರೆಗೆ ಕುಚ್ಚು ಹಾಕಿಸದೆ ಉಡುವ ಹೆಣ್ಣುಮಕ್ಕಳೇ ಅಪರೂಪ. ಸೀರೆಗೆ ಕುಚ್ಚು ಹಾಕುವುದು ಮಹಿಳೆಯರಿಗೆ ಒಂದು ಉದ್ಯೋಗ ಒದಗಿಸಿ ಕೊಟ್ಟಿದೆ, ಅಷ್ಟು ಎತ್ತರಕ್ಕೆ ಅದು ಫ್ಯಾಷನ್ ಟ್ರೆಂಡ್ ಆಗಿ ಬೆಳೆದಿದೆ.**

ಸೀರೆ ಹೆಂಗಳೆಯರ ಸಾರ್ವಕಾಲಿಕ ಆಯ್ಕೆಯ ಉಡುಪು. ಸೀರೆಯಲ್ಲಿ ಹೆಣ್ಣಿನ ಅಂದಕ್ಕೆ ಮರುಳಾಗದವರು ಯಾರಿದ್ದಾರೆ?. ನೂರೆಂಟು ದಿರಿಸುಗಳು ಬಂದರೂ ಸೀರೆಗಿರುವ ಮೋಹಕತೆ, ಬೇಡಿಕೆ ಕುಸಿದಿಲ್ಲ. ಮುಂದೆಯೂ ಕಡಿಮೆಯಾಗುವ ಸಾಧ್ಯತೆ ಇಲ್ಲ. ಫ್ಯಾಷನ್ ಲೋಕದಲ್ಲಿ ನಿರಂತರವಾಗಿ ಬದಲಾವಣೆಗಳಾಗುತ್ತಿವೆ. ಸೀರೆಯ ವಿನ್ಯಾಸ, ಗುಣಮಟ್ಟ, ಉಡುವ ರೀತಿ ಎಲ್ಲವೂ ಸದಾ ಬದಲಾಗುತ್ತಿವೆ. ಆದರೆ ಸೀರೆ ಎನ್ನುವ ದಿರಿಸಿಗೆ ಆಕರ್ಷಣೆ ಕಡಿಮೆಯಾಗಿಲ್ಲ.

ಮೊದಲು ಯಾರೂ ಅಷ್ಟು ಗಮನಹರಿಸದ ಸೀರೆಯ ಭಾಗ ಸೀರೆಯ ತುದಿಯ ಕುಚ್ಚಿಗೂ ಈಗ ಪ್ರಾಮುಖ್ಯತೆ ಬರುತ್ತಿದೆ. ಅದರ ವಿನ್ಯಾಸಗಳಲ್ಲೂ ಗಮನಾರ್ಹ ಬದಲಾವಣೆಗಳಾಗುತ್ತಿವೆ. ಸೀರೆಯ ತುದಿಗೆ ಕಟ್ಟುವ ಕುಚ್ಚು ಸೀರೆಯ ಅಂದವನ್ನು ವರ್ಧಿಸುತ್ತಿದೆ. ಹೆಂಗಳೆಯರ ಗಮನ ಅತ್ತ ಹರಿಯುತ್ತಿದೆ. ಈಗಂತೂ ಸೀರೆಗೆ ಕುಚ್ಚು ಇಲ್ಲದೇ ಉಡುವವರೇ ಅಪರೂಪ. ಅದು ಐನೂರು ರೂಪಾಯಿಯದಾಗಿರಲಿ ಅಥವಾ ಇಪ್ಪತ್ತೈದು ಸಾವಿರದ್ದಾಗಿರಲಿ. ಕುಚ್ಚು ಬೇಕೇ ಬೇಕು. ಸೀರೆಯ ಜೊತೆಗೆ ಸೀರೆಯ ಅಲಂಕಾರಕ್ಕೆ ಹೆಚ್ಚು ಒತ್ತು ನೀಡುತ್ತಿದ್ದಾರೆ.

ಮೊದಲೆಲ್ಲಾ ರೇಷ್ಮೆ ಸೀರೆಗೆ ನೂಲು ಬಿಚ್ಚಿಹೋಗದಂತೆ ಅದೇ ದಾರವನ್ನು ತೆಗೆದು ಗಂಟು ಹಾಕಿ ತೆಗೆದ ದಾರದಿಂದ ಕುಚ್ಚು ಕಟ್ಟುತ್ತಿದ್ದರು. ಕ್ರಮೇಣ ಅದರಲ್ಲೇ ಬೇರೆ ಬೇರೆ ರೀತಿಯ ಶೈಲಿಯಲ್ಲಿ ಗಂಟು ಹಾಕುವ ಕ್ರಮ ಬಂತು. ಗೊಂಡೆ ಹಾಕುವುದು ಎಂದೂ ಹೇಳುತ್ತಾರೆ. ಆದರೆ ಈಗೀಗ ಹೊಸಹೊಸ ರೀತಿಯ ಕುಚ್ಚುಗಳು ಬಂದಿವೆ. ಅದರಲ್ಲಿ ಕ್ರೋಶದಿಂದ ಹಾಕುವ ಕುಚ್ಚುಗಳು ಬಹಳ ಜನಪ್ರಿಯ. ಇದರ ಬೆಲೆ ಕೇಳಿದರೆ ಖಂಡಿತವಾಗಿಯೂ ಆಶ್ಚರ್ಯವಾಗುತ್ತದೆ. ಕಡಿಮೆ ಎಂದರೂ ಇನ್ನೂರೈವತ್ತರಿಂದ ಹಿಡಿದು ಮೂರ್ನಾಲ್ಕು ಸಾವಿರದವರೆಗೂ ಇದೆ.

ಕ್ರೋಶದಿಂದ ವಿವಿಧ ರೀತಿಯ ವಿನ್ಯಾಸ ಮಾಡುತ್ತಾರೆ. ಅದಕ್ಕೆ ವಿವಿಧ ರೀತಿಯ ಮಣಿಗಳು, ಮುತ್ತುಗಳು ಹಾಗೂ ಜರಿಗಳನ್ನು ಜೋಡಿಸುತ್ತಾರೆ. ಇದು ಮದುವೆಯ ಸೀರೆಗೆ ಹೆಚ್ಚು ಮೆರುಗನ್ನು